ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-2, September-October 2026, Pp. 33-43
©*IIMRD*, Mysuru
www.iimrd.com

ಪ್ರಗತಿಶೀಲ ಕಾಲಘಟ್ಟದ ಕಥೆಗಳಲ್ಲಿ ಕೌಟುಂಬಿಕ ಸಂಬಂಧಗಳು

ಶ್ರೀನಿವಾಸ ಎನ್. ಹೆಚ್
ದಾಸರಹಳ್ಳಿ, ಹೊಳಲ್ಕೆರೆ, ಚಿತ್ರದುರ್ಗ

ಸಾರಾಂಶ: (Abstract)

ಪ್ರಗತಿಶೀಲ ಕಾಲಘಟ್ಟದ ಕನ್ನಡ ಕಥೆಗಳಲ್ಲಿ ಕೌಟುಂಬಿಕ ಸಂಬಂಧಗಳ ಸ್ವರೂಪ ಮತ್ತು ಅವುಗಳಲ್ಲಿನ ಬದಲಾವಣೆಗಳನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಕುಟುಂಬ ವ್ಯವಸ್ಥೆಯಲ್ಲಿ ಕಂಡುಬರುವ ಪ್ರೀತಿ, ವಾತ್ಸಲ್ಯ, ಪರಸ್ಪರ ನಂಬಿಕೆ, ಜವಾಬ್ದಾರಿ, ಸಂಘರ್ಷ ಮತ್ತು ಭಾವನಾತ್ಮಕ ಸಂಬಂಧಗಳನ್ನು ಕಥೆಗಳ ಮೂಲಕ ಅಧ್ಯಯನ ಮಾಡಲಾಗಿದೆ. ಆಧುನಿಕ ಸಾಮಾಜಿಕ ಬದಲಾವಣೆಗಳು, ಆರ್ಥಿಕ ಪರಿಸ್ಥಿತಿಗಳು, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಮೌಲ್ಯಗಳು ಕೌಟುಂಬಿಕ ಸಂಬಂಧಗಳ ಮೇಲೆ ಬೀರುವ ಪರಿಣಾಮಗಳನ್ನು ಇಲ್ಲಿ ಚರ್ಚಿಸಲಾಗಿದೆ. ಪ್ರಗತಿಶೀಲ ಕಥೆಗಾರರು ಕುಟುಂಬದೊಳಗಿನ ಅಸಮಾನತೆ, ಮಹಿಳೆಯರ ಸ್ಥಾನಮಾನ, ತಲೆಮಾರುಗಳ ನಡುವಿನ ಅಂತರ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಒಟ್ಟಾರೆಯಾಗಿ, ಪ್ರಗತಿಶೀಲ ಕಾಲಘಟ್ಟದ ಕಥೆಗಳು ಕೌಟುಂಬಿಕ ಸಂಬಂಧಗಳ ವಾಸ್ತವಿಕ ಚಿತ್ರಣದ ಮೂಲಕ ಮಾನವೀಯ ಮೌಲ್ಯಗಳು, ಸಮಾನತೆ ಮತ್ತು ಸಾಮಾಜಿಕ ಸುಧಾರಣೆಯ ಮಹತ್ವವನ್ನು ಪ್ರತಿಪಾದಿಸುತ್ತವೆ.

ಮುಖ್ಯಪದಗಳು (Keywords): *ಪ್ರಗತಿಶೀಲ ಸಾಹಿತ್ಯ, ಕನ್ನಡ ಸಣ್ಣಕಥೆಗಳು, ಕೌಟುಂಬಿಕ ಸಂಬಂಧಗಳು, ಸಾಮಾಜಿಕ ಬದಲಾವಣೆ, ಮಾನವೀಯ ಮೌಲ್ಯಗಳು*

ಪೀಠಿಕೆ

'ಕುಟುಂಬ'ವು ಸಾಮಾಜಿಕ ವ್ಯವಸ್ಥೆಯು ರೂಢಿಸಿಕೊಂಡು ಬಂದ ಒಂದು ಸಾಂಸ್ಥಿಕ ಸ್ವರೂಪವಾಗಿದೆ. ಇದು ಸಮಾಜದ ಅತ್ಯಂತ ಚಿಕ್ಕ ಘಟಕ. ಈ ಘಟಕದಲ್ಲಿ ಸ್ತ್ರೀ–ಪುರುಷರು ಹಲವು ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಹಲವಾರು ಸದಸ್ಯರಿರುವ ಕುಟುಂಬದಲ್ಲಿ ಭಿನ್ನ ಆಲೋಚನೆಗಳನ್ನು ಹೊಂದಿರುವ, ಭಿನ್ನ ಸ್ವಭಾವದವರು ಇರುತ್ತಾರೆ. ಪ್ರತಿಯೊಬ್ಬರ ಸ್ವಭಾವಕ್ಕೂ ಮನ್ನಣೆಯನ್ನು ಕೊಡಬೇಕಾಗುತ್ತದೆ. ಅಲ್ಲದೆ ಭಾವನಾತ್ಮಕ ಸಂಬಂಧಗಳು ಬೆಳೆಯುವಂತಹ ವಾತಾವರಣವನ್ನು ಸೃಷ್ಟಿಸಬೇಕಾಗುತ್ತದೆ. ಜೊತೆಗೆ ಕುಟುಂಬದಲ್ಲಿನ ಆಚಾರ–ವಿಚಾರ, ರೂಢಿ, ಸಂಪ್ರದಾಯಗಳನ್ನು ಪಾಲಿಸಬೇಕು. ಕುಟುಂಬದಲ್ಲಿ ಇದ್ದ ಪ್ರತಿಯೊಬ್ಬರೂ ಕಷ್ಟ–ಸುಖಗಳನ್ನು ಪರಸ್ಪರ ಹಂಚಿಕೊಂಡು ಬಾಳಬೇಕು. ಆಗ ಸ್ತ್ರೀ–ಪುರುಷರ ನಡುವಿನ ಅಂತರ ಕಡಿಮೆಯಾಗಿ ಕೌಟುಂಬಿಕ ಸಮಸ್ಯೆಗಳು ಇಲ್ಲದೆ ನೆಮ್ಮದಿಯ ಜೀವನ ಮಾಡಲು ಸಾಧ್ಯವಾಗುತ್ತದೆ.

Please cite this article as: ಶ್ರೀನಿವಾಸ, ಎನ್. ಹೆಚ್. (2026). ಪ್ರಗತಿಶೀಲ ಕಾಲಘಟ್ಟದ ಕಥೆಗಳಲ್ಲಿ ಕೌಟುಂಬಿಕ ಸಂಬಂಧಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(2), ಪು.ಸಂ.* 33–43

ಸಮಾಜಮುಖಿ ಮತ್ತು ವಾಸ್ತವ ಬರಹಕ್ಕೆ ಹೆಸರಾದ ಪ್ರಗತಿಶೀಲ ಸಾಹಿತಿಗಳು ತಮ್ಮ ಹಲವಾರು ಕಥೆಗಳಲ್ಲಿ ಕೌಟುಂಬಿಕ ಸಂಬಂಧದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಆ ಮೂಲಕ ಕುಟುಂಬದ ನಾನಾ ಮುಖಗಳನ್ನು ಮುಖ್ಯ ಭೂಮಿಕೆಯಾಗಿ ಚಿತ್ರಿಸಿದ್ದಾರೆ. ಆದರ್ಶ ಗುಣ–ಅವಗುಣ, ದಾಂಪತ್ಯದ ಸರಸ–ವಿರಸ, ಸಂಬಂಧಗಳ ಬೆಸುಗೆ–ಶಿಥಿಲತೆ, ಶೋಷಣೆ–ಕ್ರೌರ್ಯ, ಪರಸ್ಪರ ಗೌರವ–ಸಹಾಯ ಮುಂತಾದವು ಪ್ರಗತಿಶೀಲ ಸಾಹಿತಿಗಳ ಕಥೆಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳಾಗಿವೆ. ಅಲ್ಲದೆ ಕುಟುಂಬದಲ್ಲಿ ಕಂಡುಬರುವ ರಾಗ, ದ್ವೇಷ, ಭಾವ, ಬಯಕೆಗಳ ಬಗ್ಗೆಯೂ ವಿವರಿಸಿದ್ದಾರೆ. ಅವರ ಕೌಟುಂಬಿಕ ಹಿನ್ನೆಲೆಯುಳ್ಳ ಕಥೆಗಳಲ್ಲಿ ಸ್ತ್ರೀಯು ಪ್ರಧಾನ ಪಾತ್ರವಾಗಿದ್ದಾಳೆ. ಸಮಾಜದಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನಗಳನ್ನು ಕಥೆಗಳಲ್ಲಿ ಅನೇಕ ವಿಧಗಳಲ್ಲಿ ಚರ್ಚಿಸಿದ್ದಾರೆ. ಸ್ತ್ರೀಯರ ಬಹುಮುಖಿ ಸಮಸ್ಯೆಗಳನ್ನು ಕಥೆಗಳ ವಸ್ತು–ವಿಷಯವಾಗಿಟ್ಟುಕೊಂಡು ರಚಿಸಿದ್ದಾರೆ.

ಅ.ನ.ಕೃಷ್ಣರಾಯ ಅವರ 'ಪ್ರತಿರೂಪ', 'ಸ್ಮರಣ', ತ.ರಾ.ಸುಬ್ಬರಾವ್ ಅವರ 'ಗಿರಿಮಲ್ಲಿಗೆಯ ನಂದನದಲ್ಲಿ', ಬಸವರಾಜ ಕಟ್ಟೀಮನಿ ಅವರ 'ಅಪರಾಜಿತೆ', ನಿರಂಜನ ಅವರ 'ಹೊಸಕೂಸು', ಚದುರಂಗ ಅವರ 'ಒಂದು ಉಂಗುರದ ಕಥೆ' ಕಥೆಗಳನ್ನು ಮುಖ್ಯವಾಗಿಸಿಕೊಂಡು ಕೌಟುಂಬಿಕ ಸಂಬಂಧಗಳನ್ನು ಚರ್ಚಿಸುವುದು ಈ ಲೇಖನದ ಪ್ರಮುಖ ಆಶಯವಾಗಿದೆ.

ಅ.ನ.ಕೃಷ್ಣರಾಯ ಅವರ 'ಪ್ರತಿರೂಪ' ಕಥೆಯಲ್ಲಿ ಎರಡು ಭಿನ್ನ ಕುಟುಂಬಗಳ ಚಿತ್ರಣವಿದೆ. ಮೊದಲನೆಯದು ಪಾಪಣ್ಣನ ಕುಟುಂಬ. ಎರಡನೆಯದು ಕುಲವನಹಳ್ಳಿಯ ಬೈರಪ್ಪಗೌಡನ ಕುಟುಂಬ. ಪಾಪಣ್ಣನ ಕುಟುಂಬದಲ್ಲಿ ಹೆಂಡತಿ ಕಮಲ ಮತ್ತು ಮಗಳು ಲಕ್ಷ್ಮೀ. ಅವನು ತನ್ನ ಮಗಳು ಲಕ್ಷ್ಮೀಯ ಸುಖ ಸಂತೋಷಕ್ಕಾಗಿ, ವಿದ್ಯಾಬುದ್ಧಿಗಾಗಿ 'ಸಂಗೀತಕ್ಕೆ, ಪಾಠಕ್ಕೆ ಒಬ್ಬೊಬ್ಬ ಮೇಸ್ಟರು, ಅವಳನ್ನು ಸ್ಕೂಲಿಗೆ ಕರೆದುಕೊಂಡು ಹೋಗಿ ಬರುವುದಕ್ಕೆ ಒಬ್ಬ ಪ್ರತ್ಯೇಕ ಆಳು'ಗಳ ನೇಮಕ ಮಾಡಿರುತ್ತಾನೆ. ಇದು ಸ್ತ್ರೀಯರ ಅವಲಂಬನೆಯ ಜೀವನವನ್ನು ತೋರಿಸುತ್ತದೆ. ಹಾಗಾಗಿಯೇ ಸ್ತ್ರೀವಾದಿ ಚಿಂತಕಿಯರು ಈ ಅವಲಂಬನೆಯನ್ನು **"ಪರಾವಲಂಬನೆ"**[1] ಎಂದು ಕರೆದುಕೊಂಡು, ಪರಾವಲಂಬನೆಗೆ **"ಹೊರಗಿನ ಒತ್ತಡ** ಮತ್ತು ಅವಳ ವೈಯಕ್ತಿಕ ವರ್ತಮಾನದ ಬದುಕು**"**[2] ಕಾರಣವಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ರೂಪದಲ್ಲಿ ತಂದೆಯನ್ನು ಹೋಲುವ, ಗುಣ–ಬುದ್ಧಿಯಲ್ಲಿ ತನ್ನನ್ನೇ ಹೋಲುವ ತನ್ನ ಮಗಳು ಲಕ್ಷ್ಮೀಗೆ ಸರಿಯಾದ ವರನನ್ನು ಹುಡುಕಿ ಮದುವೆಯನ್ನು ಮಾಡುವ ಕಾತರ, ತವಕ ಕಮಲಮ್ಮಳದ್ದು. ಹಾಗಾಗಿಯೇ ತನ್ನ ಗಂಡ ಪಾಪಣ್ಣನಿಗೆ 'ನಿಮ್ಮ ಮಗಳಿಗೆ ಗಂಡು ಹುಡುಕುತ್ತೀರೊ ಇಲ್ಲವೋ?' ಎಂದು ಕೇಳುವ ಪ್ರಶ್ನೆಯಲ್ಲಿ ಒಬ್ಬ ತಾಯಿಗೆ ಇರಬೇಕಾದ ಎಚ್ಚರಿಕೆಯ ಕೆಲಸವನ್ನು ಮಾಡುತ್ತಾಳೆ. ಆಕೆಗೆ ಈಗಾಗಲೇ ಹತ್ತೊಂಬತ್ತು ವರ್ಷ ತುಂಬುತ್ತ ಬಂದಿದೆ. 'ದೊಂಬರ ಗಣೆ' ಹಾಗೆ ಬೆಳೆದು ನಿಂತಿದ್ದಾಳೆ ಎಂಬ ಕಮಲಮ್ಮಳ ಮಾತುಗಳಲ್ಲಿ ಹೆಣ್ಣು ಮಕ್ಕಳನ್ನು ಹೆತ್ತ ತಾಯಿಯರಿಗೆ ಇರಬೇಕಾದ ಜವಾಬ್ದಾರಿಯನ್ನು ಕಥೆಗಾರರು ಇಲ್ಲಿ ಚಿತ್ರಿಸಿದ್ದಾರೆ. ಹತ್ತೊಂಬತ್ತು ವರ್ಷ ದಾಟಿರುವ ಲಕ್ಷ್ಮೀಯು, ತನ್ನ ವಯಸ್ಸಿನ ಮಿತಿಯನ್ನು ಮೀರಿ ಅಂದರೆ ಇಪ್ಪತ್ತೈದು–ಮೂವತ್ತು ವರ್ಷಗಳು ಕಳೆದಿರುವ ಹೆಣ್ಣುಮಗಳಂತೆ ಕಾಣುತ್ತಿದ್ದದ್ದು ಮತ್ತು ಆಕೆಯ ವಿಪರೀತ ಬೆಳವಣಿಗೆಯು ಕಮಲಮ್ಮಳ ಮನೋವ್ಯಥೆಗೆ ಕಾರಣವಾಗುತ್ತದೆ. ತನ್ನ ಮಗಳಿಗೆ

ಮದುವೆ ಮಾಡಬೇಕು ಎನ್ನುವ ಅವಳ ಆಸೆಗೆ 'ಲಕ್ಷ್ಮೀ ಇನ್ನು ದೊಡ್ಡವಳಾಗಿಲ್ಲ' ಎಂಬ ಆತಂಕ ಬೇರೆ. ಇದು **"ವಯೋಸಹಜ ಮತ್ತು ಜೈವಿಕ"**[3](ಜೈವಿಕ ಎಂದರೆ ಹುಟ್ಟಿನಿಂದ ಬರುವ ದೇಹರಚನೆಯ ವ್ಯವಸ್ಥೆ, ಜೈವಿಕತೆ ಎಂಬುದು ಜೀವಕ್ಕೆ ಸಂಬಂಧಿಸಿದ ಕ್ರಿಯೆಯಾಗಿದೆ)ವಾಗಿ ಆಗಬೇಕಾದ ಸ್ತ್ರೀಯರಲ್ಲಿನ ಹೆಣ್ತನದ ಬದಲಾವಣೆಯನ್ನು ಸೂಚಿಸುತ್ತದೆ. ಅಲ್ಲದೆ ಸ್ತ್ರೀಯರ ಜೀವನದಲ್ಲಿ ಆಗಬಹುದಾದ ತೊಂದರೆಗಳಿಗೆ ಮುನ್ಸೂಚನೆಯಾಗಿ ಕಥೆಯಲ್ಲಿ ಕಾಣುತ್ತದೆ.

ಪಾಪಣ್ಣ ತನ್ನ ಹೆಂಡತಿ ಕಮಲಾಳ ಮಾತಿಗೆ ಕಿವಿ ಕೊಟ್ಟು ಕುಲವನಹಳ್ಳಿ ಬೈರಪ್ಪಗೌಡನ ಮಗನ ಬಗ್ಗೆ ವಿಚಾರಿಸಲು ಹೇಳಿದ್ದೇನೆ ಎಂದಾಗ, ಏನಾದರಾಗಲಿ ಈ ವರ್ಷ ಮಗಳಿಗೆ ಮದುವೆ ಮಾಡಿಯೇ ತೀರಬೇಕು, ನೀವೇ ಹೋಗಿ ವಿಚಾರಿಸಿಕೊಂಡು ಬನ್ನಿ ಎಂದು ಹೇಳುತ್ತಾಳೆ. ಅದಕ್ಕೆ ಪಾಪಣ್ಣ 'ಹೆಣ್ಣು ಕೊಡುತ್ತೇವೆ ಎಂದು ನಾವು ಹೋಗುವುದು ಹೀನಾಯ, ಏನೋ ಐಬಿದೆ ಎಂದು ಅವರು ಭಾವಿಸಿಕೊಳ್ಳುವುದಕ್ಕೆ ನಾನೇ ದಾರಿ ಮಾಡಿಕೊಟ್ಟ ಹಾಗಾಗುತ್ತದೆ' ಎನ್ನುವ ಮಾತುಗಳಲ್ಲಿ ಒಬ್ಬ ತಂದೆಗೆ ಇರಬೇಕಾದ ಮುಂದಾಲೋಚನೆ, ಆತಂಕವನ್ನು ಕಾಣುತ್ತೇವೆ.

ಪಾಪಣ್ಣ ಮತ್ತು ಬೈರಪ್ಪಗೌಡರ ಕುಟುಂಬಗಳ ಇಷ್ಟಾರ್ಥದಂತೆ ಶುಭಮುಹೂರ್ತದಲ್ಲಿ ಬೈರಪ್ಪಗೌಡನ ಮಗ ಭಾವಿ ಅಸೆಂಬ್ಲಿ ಮೆಂಬರ್ ರಾಮಯ್ಯನಿಗೂ, ಪಾಪಣ್ಣನ ಮಗಳು ಲಕ್ಷ್ಮೀಗೂ ವಿವಾಹವಾಗುತ್ತದೆ. ರಾಮಯ್ಯ ಮತ್ತು ಲಕ್ಷ್ಮೀ ಹೊಸದಾಗಿ ಮದುವೆಯಾದ ನವದಂಪತಿಗಳು. ಕೆಲವು ದಿನಗಳ ನಂತರ ರಾಮಯ್ಯನಿಗೆ ಪ್ರಸ್ತದ ಏರ್ಪಾಡು ಮಾಡಿರೆಂದು ಬೀಗರಿಂದ ಕಾಗದ ಬರುತ್ತದೆ. ಆಗ ಲಕ್ಷ್ಮೀಯ ತಂದೆ ಪಾಪಣ್ಣನಿಗೂ, ತಾಯಿ ಕಮಲಮ್ಮಳಿಗೂ ಇದು ದೊಡ್ಡ ಯೋಚನೆಯಾಗುತ್ತದೆ. ಈ ಯೋಚನೆಗೆ ಕಾರಣ ತಮ್ಮ ಮಗಳು ಲಕ್ಷ್ಮೀ ಇನ್ನೂ ಋತುಮತಿಯಾಗದಿರುವುದು. ಕೂಡಲೇ ಕಮಲಮ್ಮ ತನ್ನ ಮಗಳು ಋತುಮತಿಯಾಗಲೆಂದು ಡಾಕ್ಟರನ್ನು ಕರೆಸಿ ಔಷಧೋಪಚಾರ, ಇಂಜೆಕ್ಷನ್‌ಗಳನ್ನು ಕೊಡಿಸುತ್ತಾರೆ. ಇದು ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ. ಆಗ ತನ್ನ ಪರಿಚಯಸ್ಥರಾದ ಅಳಲೆಕಾಯಿ ಪಂಡಿತ ಗುಂಡೂರಾಯರನ್ನು ಕರೆಸಿ ತನ್ನ ಮಗಳು ಲಕ್ಷ್ಮೀಯ ನಾಡಿಯನ್ನು ಪರೀಕ್ಷಿಸಿದಾಗ 'ಅಮ್ಮಯ್ಯಂಗೆ ಮೈಯಲ್ಲಿ ಏನೂ ಇಲ್ಲ. ಆರೋಗ್ಯವಾಗಿದ್ದಾಳೆ. ಇದೊಂದು ರೀತಿಯ ಮಾನಸಿಕ ರೋಗ' ಎಂದು ಹೇಳುತ್ತಾರೆ. ಈ ಮಾನಸಿಕ ರೋಗ ನಿವಾರಣೆಯಾಗಬೇಕಾದರೆ 'ಮಾನವ ಸಂಪರ್ಕ ಬೇಕು' ಎಂದು ಪರಿಹಾರ ನೀಡುತ್ತಾರೆ. ಇಲ್ಲಿ ನಾಟಿ ವೈದ್ಯರ ಮಹತ್ವತೆ ಕಂಡುಬಂದರೂ ನಾಟಿ ವೈದ್ಯರಾದ 'ಗುಂಡೂರಾಯರು ಸೂಚಿಸಿದ ಪರಿಹಾರ ಅನುಸರಿಸಲು ಯೋಗ್ಯವೇ'[4] ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಕಷ್ಟಕರವಾದದು. 'ಲಕ್ಷ್ಮೀಯಂತಹ ಸಮಸ್ಯೆಯನ್ನು ಹೊಂದಿರುವವರು ಇದನ್ನು ಅನುಸರಿಸಿದರೆ ಆಗುವ ಅನಾಹುತ ಎಂತಹದ್ದು ಎಂಬುದನ್ನು ಕಥೆಗಾರರು ಚಿಂತಿಸಿದಂತೆ ಕಾಣುವುದಿಲ್ಲ. 'ಇದು ಕಥೆ ಅಷ್ಟೇ ಜೀವನವಲ್ಲ' ಎಂದುಕೊಂಡರೆ ಸಾಹಿತ್ಯ ಓದುಗರ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಪಂಡಿತ ಗುಂಡೂರಾಯರು 'ನಿಮ್ಮ ನಂಬಿಕೆ ಉಳಿಸಿಕೊಂಡಿರೋ ಹುಡುಗರು ನಿಮ್ಮ ಪೈಕಿ ಯಾರಾದರೂ ಇದ್ದಾರೆಯೇ' ಎಂದು ಲಕ್ಷ್ಮೀಯ ತಂದೆ–ತಾಯಿಯರನ್ನು ಕೇಳುತ್ತಾರೆ. ಅದಕ್ಕೆ ಅವರು ಮೊದಲು ಇಲ್ಲ ಎಂದವರು ನಂತರ ತಮ್ಮ ಮಗಳಿಗೆ ಪಾಠ ಹೇಳಿ ಕೊಡುವ ಮೇಷ್ಟ್ರು ಸುಬ್ಬರಾಯ ಇದ್ದಾನೆ

ಎಂದು ಸೂಚಿಸುತ್ತಾರೆ. ಕೂಡಲೇ ಪಂಡಿತ ಗುಂಡೂರಾಯರು ನಮ್ಮ ಸುಬ್ಬು... ನಾನು ಅವನನ್ನು ಚೆನ್ನಾಗಿ ಬಲ್ಲೆ. ಅವನಿಗೆ ಈ ಕೆಲಸ ವಹಿಸಿದರಾಯಿತು ಎನ್ನುತ್ತಾರೆ. ಮುಂದಿನ ದಿನಗಳಲ್ಲಿ ಆಗಬಹುದಾದ ತೊಂದರೆಯ ಬಗ್ಗೆ ಯೋಚನೆ ಮಾಡುವ ಪಾಪಣ್ಣನಿಗೆ 'ನೀವು ಮತ್ತು ನಿಮ್ಮ ಹೆಂಡತಿ ಯೋಚನೆ ಮಾಡಿ ಅವನನ್ನು ನನ್ನ ಬಳಿ ಕಳಿಸಿಕೊಡಿ. ಅವನಿಗೆ ಇರುವ ಪರಿಸ್ಥಿತಿಯನ್ನು ವಿವರಿಸಿ ತಿಳಿಸುತ್ತೇನೆ' ಎಂದು ಹೇಳುತ್ತಾರೆ.

ಪಂಡಿತ ಗುಂಡೂರಾಯರ ಸಲಹೆಯಂತೆ ಲಕ್ಷ್ಮೀಯ ಮನೆಯಲ್ಲಿ ಸುಬ್ಬರಾಯ ಹೇಳಿ ಕೊಡುವ ಪಾಠದ ಕೊಠಡಿಯು ಬದಲಾಯಿತು. ದಿನಗಳು ಕಳೆದಂತೆ ಸುಬ್ಬರಾಯ ಮತ್ತು ಲಕ್ಷ್ಮೀಯರಿಬ್ಬರು ಒಂದು ದಿನ ಒಬ್ಬರಲ್ಲೊಬ್ಬರು ಬೆರೆತರು. ಲಕ್ಷ್ಮಮ್ಮ ಋತುಮತಿಯಾದಳು. ಈ ವಿಷಯದಿಂದ ಸಂತೋಷಗೊಂಡ ಪಾಪಣ್ಣ, ಪ್ರಸ್ತದ ದಿವಸವನ್ನು ಗೊತ್ತುಪಡಿಸಿದ ಸುದ್ದಿಯನ್ನು ಬೀಗರಿಗೆ ಮುಟ್ಟಿಸಿದನು. ಪ್ರಸ್ತದ ಶಾಸ್ತ್ರ ಮುಗಿದ ಮೇಲೆ ಬೈರಪ್ಪಗೌಡನು ಮಗ–ಸೊಸೆಯರೊಂದಿಗೆ ಕುಲವನಹಳ್ಳಿಗೆ ಪ್ರಯಾಣ ಮಾಡಿದರು. ಸುಖ ಸಂಸಾರ ಸಾಗಿದ ಕೆಲವು ದಿನಗಳ ನಂತರ ಕಮಲಮ್ಮ ಅಜ್ಜಿಯಾಗುವ ಸಿಹಿಸುದ್ದಿ ಸಿಕ್ಕಿತು. ಕಮಲಮ್ಮ ತಾನು ಅಂದುಕೊಂಡಂತೆಯೇ ಚೊಚ್ಚಲು ಬಾಣಂತನವನ್ನು ತನ್ನ ಮನೆಯಲ್ಲಿಯೇ ಮಾಡಿದಳು. ವಂಶೋದ್ಧಾರಕನಾದ ಗಂಡುಮಗುವಿನ ಜನನವಾಯಿತು. ಮೂರು ತಿಂಗಳಲ್ಲಿ ಹೆಂಡತಿ ಮತ್ತು ಮಗುವನ್ನು ಕರೆದುಕೊಂಡು ಹೋಗುತ್ತೇನೆ ಎಂದಿದ್ದ ರಾಮಯ್ಯನು ಐದು ತಿಂಗಳು ಕಳೆದರೂ ಬರುವುದಿಲ್ಲ. ಕಾರಣ ತಿಳಿಯದ ಪಾಪಣ್ಣನಿಗೆ ಈ ವಿಚಾರದಿಂದ ಕಳವಳ, ಆತಂಕವುಂಟಾಗುತ್ತದೆ. ನಂತರ ಬಂದಿದ್ದ ಕಾಗದ ಪತ್ರದೊಂದಿಗೆ ಪಂಡಿತರಲ್ಲಿಗೆ ಬಂದು ಕಾಗದಲ್ಲಿನ ವಿಚಾರವನ್ನು ಮುಟ್ಟಿಸಿದನು. ಪಂಡಿತ ಗುಂಡೂರಾಯರು ಕುಲವನಹಳ್ಳಿ ಬೈರಪ್ಪಗೌಡನ ಬಳಿ ಬಂದು ಆಗಿರುವ ಸಮಸ್ಯೆಯನ್ನು ವಿಚಾರಿಸಿದರು. ಆಗ ಬೈರಪ್ಪಗೌಡರು 'ಅವಳ ನೀತಿ ಚೆನ್ನಿಲ್ಲ. ಅವಳು ಹೆತ್ತಿರೋ ಮಗು ನಮ್ಮ ರಾಮಯ್ಯನದಲ್ಲ. ಮಗುವನ್ನು ನೋಡಿ, ಅದೂ ತಾಯಿಯ ತರ ಇಲ್ಲ, ತಂದೆಯ ತರ ಇಲ್ಲ' ಎಂದು ಹೇಳುತ್ತಾನೆ. ಅದಕ್ಕೆ ಪಂಡಿತ ಗುಂಡೂರಾಯರು ಗಹಗಹಿಸಿ ನಕ್ಕು ಪುಸ್ತಕವೊಂದರಲ್ಲಿನ ಜಾನ್ ಮತ್ತು ಫಿಲ್ಲಿಸ್‌ರ ದಾಂಪತ್ಯ ವಿಚ್ಛೇದನದ ಕಥೆಯನ್ನು ಸಾಂದರ್ಭಿಕವಾಗಿ ವಿವರಿಸುತ್ತಾರೆ. ಅಲ್ಲದೆ ಆ ಕಥೆಯ ನೀತಿಯೊಂದನ್ನು ಬೈರಪ್ಪಗೌಡರಿಗೆ ಮನವರಿಕೆ ಮಾಡುತ್ತಾರೆ. ಆಗ ಪಂಡಿತರ ಮಾತನ್ನು ನಂಬುವ ರಾಮಯ್ಯ ತನ್ನ ಹೆಂಡತಿಯನ್ನು ಒಪ್ಪಿಕೊಳ್ಳುತ್ತಾನೆ.

ಈ ಕಥೆಯು ತಂದೆಗೆ ಇರಬೇಕಾದ ಜವಾಬ್ದಾರಿಯ ಜೊತೆಗೆ ತಾಯಿಗೆ ಇರುವ ಆತಂಕವನ್ನು ವಿವರಿಸುತ್ತದೆ. ಜೊತೆಗೆ ಜೈವಿಕವಾಗಿ, ವಯೋಸಹಜವಾಗಿ ನಡೆಯಬೇಕಾದ ಋತುಮತಿಯಂತಹ ಕಾರ್ಯ ಅನ್ಯಮಾರ್ಗದ ಮೂಲಕ ನಡೆಯುವುದು ಮತ್ತು ಸ್ತ್ರೀಯನ್ನು ಪುರುಷ ಸಮಾಜ ನೋಡುವ ರೀತಿಯನ್ನು ಈ ಕಥೆಯು ಚಿತ್ರಿಸಿದೆ. ಹಾಗಾಗಿಯೇ ಡಾ.ಬೆಳ್ಳೂರು ವೆಂಕಟಪ್ಪ ಅವರು **"ಋತುಮತಿಯಾಗದ ವಿವಾಹಿತ ಸ್ತ್ರೀಯ ಸಮಸ್ಯೆಯನ್ನು ಅಳಲೇಕಾಯಿ ಪಂಡಿತರೊಬ್ಬರು ನಿವಾರಿಸುವ ಕ್ರಮ ಬೆಚ್ಚಿ ಬೀಳಿಸುವಂತಹದ್ದು"**[5] ಎಂಬ ವಿಷಯಕ್ಕೆ ಪ್ರತ್ಯುತ್ತರವಾಗಿ ಇದು ಬೆಚ್ಚು ಬಿಡಿಸುವಂತಹದಲ್ಲ **"ಮೆಚ್ಚುವಂತಹದ್ದು"**[6] ಎಂದು ಹೇಳುತ್ತಾರೆ. ಅದಕ್ಕೆ ಅವರು **"ಯಾವ ವೈದ್ಯ–ಪದ್ಧತಿಗಳಿಂದಲೂ ನಿವಾರಿಸಲಾಗದ ಸಮಸ್ಯೆಯನ್ನು ಪಂಡಿತ ಗುಂಡೂರಾಯರು ಸುಲಭವಾಗಿ ಪರಿಹಾರ ಕಾಣಿಸುತ್ತಾರೆ"**[7] ಎಂಬ ಕಾರಣವನ್ನು ನೀಡುತ್ತಾರೆ.

ಶಿಕ್ಷಕ ಮತ್ತು ಪಂಡಿತ ವೃತ್ತಿಗಳೆರಡು ಶ್ರೇಷ್ಠವಾದವು. ಆದರೆ ಮೇಷ್ಟ್ರಾದ ಸುಬ್ಬರಾಯ 'ಉಪಕಾರಕ್ಕೆ ಪ್ರತ್ಯುಪಕಾರ' ಎಂದು ಭಾವಿಸಿಕೊಂಡು ಮಾಡುವ ಈ ಕೆಲಸ ತೀರ ಭಿನ್ನವಾದದು. ತಿಳಿದಂತಹವರು ಹೇಳುವುದೆಲ್ಲ ಸರಿಯಾಗಿಯೇ ಇರುತ್ತದೆ ಎಂದುಕೊಳ್ಳುವುದು ಅವಿವೇಕದ ಪರಮಾವಧಿಯಾಗಿ ಈ ಕಥೆಯಲ್ಲಿ ಕಾಣುತ್ತದೆ.

ಮೂರು ತಲೆಮಾರುಗಳ ಭಾವನಾತ್ಮಕ ಸಂಬಂಧದ ಕೌಟುಂಬಿಕ ಆವರಣದಲ್ಲಿ ರಚಿತವಾಗಿರುವ ಕಥೆ 'ಸ್ಮರಣ'. ಕಷ್ಟ–ಕಾರ್ಪಣ್ಯಗಳಲ್ಲೇ ಜೀವನ ಸಾಗಿಸಿದ್ದ ರಂಗಮ್ಮ. ಹಾಗಾಗಿಯೇ ರಂಗಮ್ಮ ಕಷ್ಟದ ಜೀವಿ ಎಂದು ಹೆಸರಾದವಳು. ಅವಳ ಮಗಳು ಹೊನ್ನಮ್ಮ. ಇಬ್ಬರ ಬದುಕಿನ ಆಶಾಕಿರಣ ಹೊನ್ನಮ್ಮಳ ಮಗಳು ಪುಟ್ಟತಾಯಿ. ಹಾಗಾಗಿಯೇ 'ತರಗೆಲೆಯಂತಿದ್ದ ರಂಗಮ್ಮಳ ಮಧ್ಯೆ ಒಂದು ಅಪರೂಪದ ಪ್ರೇಮವಾಗಿ' ಪುಟ್ಟತಾಯಿ ಬೆಳೆದಿದ್ದಳು. ಆದರೆ ಹೊನ್ನಮ್ಮ ಮತ್ತು ಪುಟ್ಟತಾಯಿಯರು ಅಂತಹ ನಿಕಟ ಸಂಬಂಧವೇನೂ ಹೊಂದಿರದಿದ್ದರೂ ಈ ಮೂರು ಜೀವಿಗಳು ಒಬ್ಬರನ್ನೊಬ್ಬರು ಸರಿಯಾಗಿ ಅರ್ಥ ಮಾಡಿಕೊಂಡು ಬದುಕಿಗೊಂದು ನೆಲೆಯನ್ನು ಕಂಡುಕೊಂಡಿದ್ದರು. ಮುದುಕಿ ರಂಗಮ್ಮ ತನ್ನ ಮೊಮ್ಮಗಳು ಪುಟ್ಟತಾಯಿಯ ಆರೈಕೆಯಲ್ಲಿಯೇ ತನ್ನ ಜೀವನದ ವೃದ್ಧಾಪ್ಯತೆಯನ್ನು ಮರೆತರೆ, ತಾಯಿ ಹೊನ್ನಮ್ಮಳು ತನಗೆ ಬಂದಿದ್ದ ವೈಧವ್ಯತೆಯನ್ನು ಮರೆಯುತ್ತಿದ್ದಳು. ಪುಟ್ಟತಾಯಿಯು ನೊಂದ ಈ ಎರಡೂ ಜೀವಗಳ ಬದುಕಿನ ಆಸೆ, ಆಸರೆಯಾಗಿದ್ದಳು. 'ಸಂಜೆಯಾದರೆ ಸುತ್ತಮುತ್ತಲಿದ್ದ ತನ್ನ ಗೆಳತಿಯರನ್ನು ಕಲೆಹಾಕಿಕೊಂಡು' ಅಜ್ಜಿಯನ್ನು ವಿಡಂಬನೆ ಮಾಡಿಕೊಂಡು ತನ್ನ ಗೆಳತಿಯರ ಸಂಗಡ ಖುಷಿಯಿಂದ ಇರುತ್ತಿದ್ದದ್ದು, ಇದನ್ನು ಕಂಡು ತಾಯಿ ರಂಗಮ್ಮ ಬದುಕಿನ ನೋವು–ಸಂಕಟಗಳನ್ನು ಎಲ್ಲವನ್ನೂ ಮರೆತು ಸಂತೋಷವಾಗಿರುತಿದ್ದಳು. ಇವರ ಸುಖ ಸಂತೋಷದ ಸಾಮ್ರಾಜ್ಯಕ್ಕೆ ಕೊಡಲಿಪೆಟ್ಟು ಬಿತ್ತು. ಆರೋಗ್ಯ ಸರಿಯಿಲ್ಲದ ಕಾರಣ ಪುಟ್ಟತಾಯಿ ಅಸುನೀಗಿದಳು.

ಮೊಮ್ಮಗಳ ಅಗಲಿಕೆಯಿಂದ ರಂಗಮ್ಮಳ ರೀತಿಯು ಬದಲಾಯಿತು. ಇದು ರಂಗಮ್ಮ ಸಂಪೂರ್ಣವಾಗಿ ನೆಲ ಕಚ್ಚುವಂತೆ ಮಾಡಿತು. ಭಿಕ್ಷೆಯನ್ನು ಬೇಡಿಕೊಂಡು ಬಂದ ಅನಾಥ ಬಾಲಕಿಯಲ್ಲಿ ತನ್ನ ಮೊಮ್ಮಗಳನ್ನು ಕಾಣುವ ಗುಣ ಅವಳದು. ಏಕೆಂದರೆ ಆ ಭಿಕ್ಷುಕ ಹುಡುಗಿಯು ತನ್ನ ಮೊಮ್ಮಗಳು ಪುಟ್ಟತಾಯಿಯನ್ನು ಹೋಲುತ್ತಿದ್ದದ್ದು. ಹಾಗಾಗಿಯೇ 'ನೀನು ಇವತ್ತಿನಿಂದ ಭಿಕ್ಷಕ್ಕೆ ಹೋಗಬೇಡ, ಇಲ್ಲೇ ಇದ್ದುಬಿಡು. ನಿನಗೆ ಬೇಕಾದ್ದು ಕೊಡುತ್ತೇನೆ. ನನ್ನ ಮಗಳೂಂತ ಭಾವಿಸುತ್ತೇನೆ' ಎಂದು ರಂಗಮ್ಮ ಹೇಳುವಳು. ಅಲ್ಲದೆ ತನ್ನ ಸ್ವಂತ ಮೊಮ್ಮಗಳು ಪುಟ್ಟತಾಯಿಗೆ ಯಾವ ರೀತಿಯ ಉಪಚಾರ ನಡೆಯುತ್ತಿತ್ತೋ ಹಾಗೆಯೇ ಈ ಭಿಕ್ಷುಕ ಹುಡುಗಿಗೂ ಉಪಚಾರ, ಲಾಲನೆ ಪಾಲನೆ ಎಲ್ಲವೂ ನಡೆಯುತ್ತಿತ್ತು. ಜೊತೆಗೆ ಪುಟ್ಟತಾಯಿಯ ಹೆಸರಿನಿಂದ ಪುಟ್ಟು ಎಂದು ನಾಮಕರಣವೂ ಆಗಿತ್ತು. ಆದರೆ ಒಂದು ದಿನ ಆ ಭಿಕ್ಷುಕ ಹುಡುಗಿ ತನ್ನ ಬದುಕನ್ನೇ ನಂಬಿ, ರಂಗಮ್ಮರ ಮನೆಯಿಂದ ಕಾಣೆಯಾದಳು. ರಂಗಮ್ಮ ಅನ್ನ ನೀರು ಬಿಟ್ಟು ಅವಳಿಗಾಗಿ ಹಂಬಲಿಸುತ್ತ ಕುಳಿತಳು. ಅವಳ ಬರುವಿಕೆಯ ದಾರಿಯನ್ನು ಈಗ ಬರಬಹುದು, ಇನ್ನೊಂದು ಕ್ಷಣಕ್ಕೆ ಬರಬಹುದು' ಎಂದು ಕಾಯುವುದೇ ಆಯಿತು. ಈ ರೀತಿಯ ಪರಿಸ್ಥಿತಿಯಿಂದ ರಂಗಮ್ಮನ ನೋವು ಸಂಕಟ ಜಾಸ್ತಿಯಾಯಿತು. ಕಥೆಯ ಹೆಸರೇ ಸೂಚಿಸುವಂತೆ ಪುಟ್ಟತಾಯಿಯ 'ಸ್ಮರಣೆ'ಯಲ್ಲೇ ಅಜ್ಜಿ ಮೊಮ್ಮಗಳ

ಭಾವನಾತ್ಮಕ ಪ್ರೀತಿಯನ್ನು, ಭಾವನಾತ್ಮಕ ಸಂಬಂಧದಲ್ಲಿ ಕಥೆಯ ಚಿತ್ರಣವಿದೆ. ಯಾವ ಗಂಡಸಿನ ಆಸರೆಯಿಲ್ಲದೆ ಬದುಕುವ ಸ್ತ್ರೀಯರಿಗೆ ಈ ರೀತಿಯ ತೊಂದರೆಗಳು, ನೋವುಗಳು, ಸಂಕಟಗಳು ಆಗುತ್ತವೆ ಎಂಬುದನ್ನು ಈ ಕಥೆಯು ನಿರೂಪಿಸುತ್ತದೆ. ತಾಯಿಯಾದವಳಿಗೆ ತನ್ನ ಮಕ್ಕಳ ಬಗ್ಗೆ ಇರಬೇಕಾದ ಪ್ರೀತಿ, ಮಮತೆ, ಆರೈಕೆಗಳನ್ನು ಈ ಕಥೆಯು ಹೇರಳವಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ.

ತ.ರಾ.ಸುಬ್ಬರಾವ್ ಅವರ ಗಿರಿಮಲ್ಲಿಗೆಯ ನಂದನದಲ್ಲಿ' ಕಥೆಯಲ್ಲಿ ಕುಟುಂಬವೊಂದರ ದುರಂತಗಳನ್ನು ಕಾಣುತ್ತೇವೆ. ಈ ಕಥೆಯ ನಿರೂಪಣೆಯು ಕಾಗದದ ಮೂಲಕ ನಡೆಯುವಂತಹ ಸಂವಾದದ ಮಾದರಿಯನ್ನು ಹೊಂದಿದೆ. ಈ ಕಥೆಯಲ್ಲಿ ಕಥಾನಾಯಕನ ಹೆಂಡತಿಯ ಪ್ರಸ್ತಾಪವಿದೆಯೇ ಹೊರತು, ಆಕೆಯ ಪಾತ್ರ ಚಿತ್ರಣವಿಲ್ಲ. ಕಥೆಯ ನಾಯಕನ ಹೆಂಡತಿ ಸರಸೂ ಬರೆದ ಕಾಗದಕ್ಕೆ ಒಂದು ಉತ್ತರವನ್ನು ನೀಡದೇ ಹೋದರೂ ಕಥೆಯ ನಾಯಕನೇ ಎರಡೂ ಕಡೆಯಿಂದ ಕಥೆಯ ದುರಂತವನ್ನು ಚಿತ್ರಿಸುತ್ತ ಹೋಗುವುದು ಕಥೆಯ ಹೊಸ ರೀತಿಯ ಲಕ್ಷಣವಾಗಿದೆ. ಶೃಂಗೇರಿಯ ರಾಮಭಟ್ಟರು, ಆತನ ಹೆಂಡತಿ ಗೌರಮ್ಮ ಮತ್ತು ರಾಮಭಟ್ಟನ ತಾಯಿ ಲಕ್ಷ್ಮೀದೇವಮ್ಮರಿಗೆ ಸಂಬಂಧಿಸಿದ ತನ್ನ ಹೆಂಡತಿ ಸರಸೂಗೆ ಕಾಣದ ಕುಟುಂಬವೊಂದರ ಚಿತ್ರಣವನ್ನು ಪತ್ರದ ಮೂಲಕ ನಾಟಕೀಯವಾಗಿ ಬರೆಯುವ ರೀತಿಯಲ್ಲಿ ಕಥೆಯು ಮುಂದುವರಿಯುತ್ತದೆ. ಈ ಕಥೆಯಲ್ಲಿ ರಾಮಭಟ್ಟರ ಹೆಂಡತಿ ಮತ್ತು ಮಗುವನ್ನು ತಿನ್ನದಿರಲಿ ಎಂದು ಪೂಜಿಸುವ 'ಮಂಜುರ್ಲಿ'(ಮಂಜುರ್ಲಿ ಎಂದರೆ ಒಂದು ಭೂತ)ಯಿಂದ ಕಥೆಯ ಮುಂದಿನ ಘಟನೆಗಳು ನಡೆಯುತ್ತವೆ.

ಒಂದು ದಿನ ಹೆಡ್‌ಮಾಸ್ಟರ್ ಮಗ 'ಬಾಗಿಲಲ್ಲಿಟ್ಟಿದ್ದ ಮಂಜುರ್ಲಿ ದೀಪ ಉರುಳಿಸಿ ಗೋಡೆಗಿದ್ದ ಪ್ರತಿಮೆ ಕಿತ್ತು ಹಾಕಿ ರಂಪ' ಮಾಡಿದ್ದನು. ಇದರ ಪರಿಣಾಮವಾಗಿ ಗೌರಮ್ಮ ತನ್ನ ಕೂದಲನ್ನು ಕಿತ್ತುಕೊಳ್ಳುತ್ತ ಅರೆಬರೆ ನಗ್ನ ಸ್ಥಿತಿಯಲ್ಲಿ 'ಹೂ' ಎಂದು ಚೀರಿ ಪ್ರಾಣ ಬಿಡುವಳು. ಅಂದೇ ಮಗುವೂ ಸಹ ಅಸುನೀಗುವುದು. ಆದರೆ ಕಥೆಯ ನಿರೂಪಕನಿಗೆ ಮಾತ್ರ ಇದರಲ್ಲಿ ನಂಬಿಕೆಯಿಲ್ಲ. ಆದರೂ ತನ್ನ ಹೆಂಡತಿ ಸರಸೂಗೆ 'ಪ್ರತಿ ಶನಿವಾರ ಕೋಟೆ ಆಂಜನೇಯನಿಗೆ ಕಾಯಿ ಒಡೆಸುವುದನ್ನು ಮರೆತಿಲ್ಲ ತಾನೇ? ಅಮ್ಮನಿಗೆ ಹೇಳಿ ಜೋಯಿಸರ ಹತ್ತಿರ ವಿಭೂತಿ ಮಂತ್ರಿಸಿಕೊಂಡು ತರಿಸಿ, ದಿನ ಸಂಜೆ ಹಣೆಗಿಟ್ಟುಕೋ' ಎಂದು ಹೇಳುವಲ್ಲಿ ಕಥೆಯ ದ್ವಂದ್ವತೆ[8]ಯು ಕಾಣುತ್ತದೆ. ಈ ಕಥೆಯಲ್ಲಿ ತುಂಬು ಕೌಟುಂಬಿಕ ಪ್ರೀತಿಯ ಜೊತೆಗೆ "ಮಾನವನ ಮೂಢನಂಬಿಕೆಯ ಬಗ್ಗೆ"[9] ವಿವರಿಸಲಾಗಿದೆ. ಹಾಗಾಗಿಯೇ "ಕಥೆಗಾರರಿಗಿರುವ ಭೂತ, ಪ್ರೇತ, ವಿಧಿ ಇತ್ಯಾದಿಗಳ ಮೇಲಿರುವ ನಂಬಿಕೆಯು ಪ್ರಗತಿಶೀಲ ಮನೋಧರ್ಮಕ್ಕೆ ವಿರುದ್ಧವಾಗಿದೆ"[10] ಎಂದು ಹೇಳಿರುವುದು ಸೂಕ್ತವಾಗಿದೆ.

ಕೌಟುಂಬಿಕ ಆವರಣದಲ್ಲಿ ಅತ್ತೆ–ಸೊಸೆಯರ ಪ್ರೀತಿ ಮತ್ತು ವೈಮನಸ್ಸುಗಳೆರಡೂ ಬಸವರಾಜ ಕಟ್ಟೀಮನಿ ಅವರ 'ಪರಾಜಿತೆ' ಕಥೆಯಲ್ಲಿ ಚಿತ್ರಿತವಾಗಿದೆ. 'ಸೊಸೆ ಬರಬೇಕಂತ ಬಹು ದಿನಗಳಿಂದ ಹಾರೈಸುತ್ತಿದ್ದೆಯಲ್ಲವೆ ಅಮ್ಮ ತಂದಿದ್ದೇನೆ ತೆಗೆದುಕೋ' ಎನ್ನುವ ಮಗನ ಮಾತುಗಳಲ್ಲಿ ಸೊಸೆಯ ಬರುವಿಕೆಗಾಗಿ ಕಾಯುತ್ತಿದ್ದ ತಾಯಿ ಪಾರ್ವತಮ್ಮಳ ಮನಸ್ಥಿತಿಯಿದೆ. "ಹಾಲಿನಂತ ಸಂಸಾರದಲ್ಲಿ ಪ್ರೇಮಾಮೃತದ ಪುತ್ತಳಿ"[11]ಯಾಗಿ ಕಾಣುವ ಸೊಸೆಯನ್ನು 'ಬಾ ನನ್ನ ರಾಣಿ, ನೀನು ನಿಜಕ್ಕೂ ರತ್ನ ಕಣೆ

ತಾಯಿ! ನಮ್ಮ ಮನೆಗೆ ಬಂದ ಭಾಗ್ಯಲಕ್ಷ್ಮೀ ನೀನು' ಎಂದು ಕರೆಯುವಾಗ ಅನುನಯದ ಪ್ರೀತಿಯಿದೆ. ಈ ರೀತಿಯ ಆರೈಕೆ, ಪ್ರೀತಿ ಇದ್ದರೂ ಸೊಸೆಯಾದವಳು ಎಳೆಮಕ್ಕಳಂತೆ 'ಬಾಲ್ಯದ ಆಟಗಾರಿಕೆಯನ್ನೇ ಮುಂದುವರಿಸಿಕೊಂಡು ಕಾಲ ಕಳೆಯುವುದನ್ನು ಕಂಡು ಸಿಟ್ಟಾಗುತ್ತಾರೆ. ಈ ರೀತಿಯ ಅತ್ತೆಯ ಮುಂಗೋಪದಿಂದ 'ಸೊಸೆಯ ನಿರ್ಮಲ' ಮನಸ್ಸಿಗೆ ಅವಿವೇಕವುಂಟಾಗುತ್ತದೆ. ಎರಡು ಸುಂದರ, ಸುಮಧುರ ಮನಸ್ಸುಗಳ ನಡುವೆ ಅಸಮಾಧಾನ ಉಂಟಾಗುತ್ತದೆ. ಮಾತಿಗೆ ಮಾತು ಬೆಳೆದು ಸ್ವಾಭಿಮಾನದ ಪಾರ್ವತಮ್ಮ ಸೊಸೆಯ ಯಾವ ಹಂಗೂ ಬೇಡವೆಂದು ಮುದ್ದಾದ ಮಗನ ಮನೆಯನ್ನು ಬಿಟ್ಟು ಹಳ್ಳಿಯ ಮನೆಗೆ ಹೊರಡುತ್ತಾಳೆ. 'ಅತ್ತೆ ಇಲ್ಲದ ಮನೆಯಲ್ಲಿ ನನ್ನ ಗಂಡನಿಗೆ ನಾನೇ ತಿಂಡಿಯನ್ನು ಬಡಿಸುತ್ತ ಇಬ್ಬರು ಒಟ್ಟಿಗೆ ಕೂತು ಮೋಜಿನಿಂದ ಹಾಯಾಗಿ ಇರಬಹುದು' ಎಂಬುದು ರತ್ನಾಳ ಆಲೋಚನೆ. ಆದರೆ ಅವಳ ಗಂಡ ಸದಾಶಿವನದು ಹಾಗಲ್ಲ. ತಾಯಿ ಹಳ್ಳಿಗೆ ಹೋದ ದಿನದಿಂದ ಸದಾಶಿವನಿಗೆ ತಾಯಿಯ ಧ್ಯಾನವೆ. ಯಾವ ರೀತಿಯ ವಿಷಯದಲ್ಲೂ ಆಸಕ್ತಿ ಇಲ್ಲ. ಮೂಕಯಂತ್ರದಂತೆ ಕೆಲಸ ಕಾರ್ಯಗಳೆಲ್ಲ. ಹಗಲೆಲ್ಲ ಆಫೀಸಿನಲ್ಲಿ ಕೆಲಸ, ಉಳಿದ ಸಮಯ ಗೆಳೆಯರ ಜೊತೆ, ಬೆಳಗ್ಗೆ–ರಾತ್ರಿಯ ಊಟದ ಜೊತೆಗೆ ರಾತ್ರಿಯೊಡನೆಯ ಹಾಸಿಗೆಯ ಸಹವಾಸಕ್ಕಷ್ಟೇ ಆತನ ಸಂಬಂಧ ಉಳಿಯುತ್ತದೆ. ಗಂಡನ ಈ ರೀತಿಯ ವ್ಯಸನ, ಚಿಂತೆಗಳಿಂದ ಭಯಗೊಂಡ ರತ್ನ ದುಃಖಿತಳಾಗುತ್ತಾಳೆ. ಒಂದು ದಿನ ಸದಾಶಿವನ ತಾಯಿ ಪಾರ್ವತಮ್ಮನಿಗೆ 'ಬಹಳ ಕಾಯಿಲೆ'ಯಾಗಿದೆ ಎಂಬ ಸುದ್ದಿಯನ್ನು ಕೇಳಿದ ರತ್ನ ತಕ್ಷಣ ಹಳ್ಳಿಗೆ ಹೋಗುತ್ತಾಳೆ. "ಅತ್ತೆಯ ಕಾಯಿಲೆಯು ಸೊಸೆಯಾದ ರತ್ನಳ ಮನಃ ಪರಿವರ್ತನೆ"[12]ಯಾಗಿ 'ಅಮ್ಮಾ ನನ್ನ ಎಲ್ಲ ಅಪರಾಧಗಳನ್ನೂ ಕ್ಷಮಿಸಿಬಿಡಿರಿ, ಈಗಲೇ ಊರಿಗೆ ಹೊರಡಿರಿ, ನಿಮ್ಮನ್ನು ಈ ಸ್ಥಿತಿಯಲ್ಲಿ ಕೊಳೆಯಲು ಬಿಟ್ಟು ನಾನಾವ ನರಕಕ್ಕೆ ಹೊಂದಲಿ?' ಎಂದಾಗ ಪಾರ್ವತಮ್ಮನವರ ಹೃದಯ ಕರಗಿ ಸೊಸೆಯನ್ನು ಎದೆಗೊತ್ತಿಕೊಳ್ಳುತ್ತಾಳೆ. ಸಾಯಂಕಾಲದ ರೈಲುಗಾಡಿಯು ಪಾರ್ವತಮ್ಮನವರನ್ನು ಮತ್ತೆ ಮಗನಲ್ಲಿಗೆ ಸಾಗಿಸಿತು. ಅಮ್ಮನನ್ನು ನೋಡಿದ ಸದಾಶಿವನಿಗೆ ಸಂತೋಷವಾಯಿತು. ಅತ್ತೆ–ಸೊಸೆ–ಮಗ ಮೂವರು ಒಂದಾದರು. ಈ ಕಥೆಯಲ್ಲಿ ಅತ್ತೆಯ ಮಾತೃವಾತ್ಸಲ್ಯ, ಯಾವುದೇ ಕಪಟತನವಿಲ್ಲದ ವಿಶಾಲ ಹೃದಯ, ಜೀವ ಹೋಗುತ್ತದೆಯೆಂದರೂ ಬಿಡದ ಸ್ವಾಭಿಮಾನ, ಸೊಸೆಯು ಕ್ಷಮೆ ಯಾಚಿಸಿದಾಗ ಎಲ್ಲವನ್ನು ಮರೆತು ಸಹಕರಿಸುವ ದೊಡ್ಡತನ ಓದುಗರ ಮೇಲೆ ಪ್ರಭಾವವನ್ನುಂಟು ಮಾಡುತ್ತದೆ. ಸಹಜ ಸ್ಥಿತಿಯಲ್ಲಿ ಸಾಗುವ ಕಥೆಯು ಕುಟುಂಬವೊಂದರಲ್ಲಿ ನಡೆಯುವ ಘಟನೆಗಳನ್ನು ವಾಸ್ತವ ಎಂಬಂತೆ ಚಿತ್ರಿಸಿರುವುದು ಕಂಡುಬರುತ್ತದೆ. ಇದು ಕಥೆಗಾರರ ಕಥಾರಚನಾ ಕಲೆಯನ್ನು ತೋರಿಸುತ್ತದೆ. 'ಪರಾಜಿತ' ಕಥೆಯು ಹೆಸರೇ ಸೂಚಿಸುವಂತೆ "ಸೊಸೆಯೇ ಕೊನೆಗೆ ಸೋಲುವ"[13] ಮೂಲಕ ಕುಟುಂಬದ ನೆಮ್ಮದಿಯ ಪುನಃ ಮರುಕಳಿಸುವುದಕ್ಕೆ ಕಾರಣಳಾಗುತ್ತಾಳೆ ಎಂಬುದು ಕಥೆಯಲ್ಲಿ ಚಿತ್ರಿತವಾಗಿದೆ. ಹಾಗಾಗಿಯೇ ಇದೊಂದು 'ಜೀವಂತ ಪಾತ್ರ'ವಾಗಿ ಕಂಡುಬರುತ್ತದೆ.

ನಿರಂಜನ ಅವರ 'ಹೊಸಕೂಸು' ಕಥೆಯು ಕರೀಮನ ಕುಟುಂಬದ ಕೌಟುಂಬಿಕ ಧೋರಣೆಗಳನ್ನು ಚಿತ್ರಿಸುತ್ತದೆ. ಈ ಕಥೆಯಲ್ಲಿ ಕುಟುಂಬ ಮತ್ತು ದೇಶದ ಸಂಕಷ್ಟಗಳು ಒಮ್ಮೆಲೆ ಮುಖಾಮುಖಿಯಾಗುತ್ತವೆ. ಕರೀಮ ತನ್ನ ಐದು ವರ್ಷದ ಮಗುವಿಗಾಗಿ ಯಾವ ಕೆಲಸ ಬೇಕಾದರೂ ಮಾಡುವವನಿರುತ್ತಾನೆ. ಏಕೆಂದರೆ

ಆ ಮಗು 'ತನ್ನ ಜೀವನದ ಸರ್ವಸ್ವ'ವಾಗಿರುತ್ತದೆ. ಹಾಗಾಗಿಯೇ ಮಗುವಿಗೆ ಮುದ್ದಿಡುತಿದ್ದ, ತನ್ನೆದೆಗೆ ಅವಚಿಕೊಂಡು ಲಾಲನೆ, ಪಾಲನೆ ಮಾಡುತ್ತಿದ್ದ. ಕೊನೆಗೆ 'ಚೆಲ್ ಬೇಟಿ, ಪೇಢೆ ತರೋಣ' ಎಂದು ಹೇಳಿ ಮಗಳನ್ನು ಕರೆದುಕೊಂಡು ಹೋಗುವಾಗ ತನ್ನೆಲ್ಲ ನೋವು–ಸಂಕಟಗಳನ್ನು ಮರೆಯುತ್ತಿದ್ದ. ತಾಯಿ ತಂದೆಯ ಜೊತೆಗೆ ಹೆಂಡತಿ ಮತ್ತು ಮುಂದೆ ಹುಟ್ಟುವ ಮಕ್ಕಳನ್ನು ಸುಖವಾಗಿಡಬೇಕೆಂದು ಕರೀಮ ಕನಸು ಕಾಣುತ್ತಿದ್ದನು. ಯಾವ ತಾಯಿಗೆ, ಯಾವ ಹೆಂಡತಿಗೆ ಎಷ್ಟು ಜನ ಸ್ತ್ರೀಯರಿಗೆ ಇಂತಹ ಭಾಗ್ಯ ಲಭಿಸೀತು. ಆದರೆ ಕರೀಮನ ಈ ಕನಸು ಕನಸಷ್ಟೇ. ಹದಿನೈದು ರೂಪಾಯಿ ಸಂಬಳವನ್ನು ಹೊಂದಿರುವವ ಏನು ತಾನೇ ಮಾಡಿಯಾನು. ಈ ನಡುವೆ ಕಷ್ಟಗಳ ನಡುವೆ ಸಂಕಷ್ಟ, ನೋವುಗಳು ಎಂಬಂತೆ ಮಗಳು ಫಾತಿಮಾಳ ಸಾವು ಅವನನ್ನು ಕುಗ್ಗಿಸುತ್ತದೆ. ಆಗ 'ಉನ್ನೀಸಾಳನ್ನು ಸರಿಯಾಗಿ ನೋಡಿಕೋ' ಎಂಬ ಮುದುಕನ ಮಾತಿನಿಂದ ಕರೀಮನು ಹುಷಾರಾಗುತ್ತಾನೆ. ಏಕೆಂದರೆ ಉನ್ನೀಸಳು ಮತ್ತೊಂದು ಮಗುವಿಗೆ ತಾಯಿಯಾಗುವವಳಿರುತ್ತಾಳೆ. ಬರಲಿರುವ ಕಾಸಿನಿಂದ ಅವನ ಆಸೆ, ಆಕಾಂಕ್ಷೆಗಳು ಹೆಚ್ಚುತ್ತವೆ.

ಅವನ ಆಲೋಚನಾಕ್ರಮ ಒಂದೇ. ಗಂಡುಮಗುವಿನ ಜನನವಾದರೆ ಅವನನ್ನು ದೊಡ್ಡ ಮನುಷ್ಯನಾಗಿ ಮಾಡುವುದು. ಒಂದು ವೇಳೆ ಹೆಣ್ಣಾದರೆ ಈಗಾಗಲೇ ತನ್ನ ನಡುವೆ ಇದ್ದು ಹೋದ ಫಾತಿಮಾಳ ಜಾಗ ತುಂಬಿ, "ಬುರ್ಕಾ(ಘೋಷಾ)ದ"[14] ಹೊದಿಕೆಯಿಲ್ಲದೆ. ಉರ್ದು ಶಾಲೆಯಲ್ಲಿ ಮಾಸ್ತರಣಿ(ಶಿಕ್ಷಕಿ)ಯನ್ನಾಗಿ ಮಾಡಿ ತನ್ನ ಸಮಾಜದ ಹೆಣ್ಣುಮಕ್ಕಳ ಹೊಸ ಬದುಕಿಗೆ ದಾರಿದೀಪ ಮಾಡುವುದಾಗಿರುತ್ತದೆ. ಇಲ್ಲಿ ಅವನ ಬಯಕೆ ಒಂದೇ. ತನಗೆ ಹುಟ್ಟುವ ಮಕ್ಕಳನ್ನು ಈ ದೇಶದ ಹೊಸ ಹೊಸ ರೀತಿಯ ಶಕ್ತಿಗಳನ್ನಾಗಿ ಮಾಡಬೇಕು. ಆ ಶಕ್ತಿಗಳು ಇನ್ನೊಬ್ಬರ ಕಣ್ಣೀರನ್ನು ಒರೆಸುವಂತಾಗಬೇಕು ಎಂಬುದು.

ಈ ರೀತಿಯ ಉದಾತ್ತ ಜೀವನವನ್ನು ಹೊಂದಿದ ಕರೀಮನು ತನಗೆ ಎದುರಾಗುವ ಸಮಸ್ಯೆಗಳನ್ನು ಹೆದರದೇ ಧೈರ್ಯವಾಗಿ ಎದುರಿಸಿ ನವಸಮಾಜದ ನಿರ್ಮಾಣದ ಕಲ್ಪನೆಯನ್ನು ಕಾಣುತ್ತಾನೆ. ಇದು ಅವನ ಹೊಸ ಬಗೆಯ ಹೊಸ ಜೀವನದ ಆಶೋತ್ತರವೂ ಸಹ ಹೌದು. ಆದರೆ ವಾಸ್ತವಾಂಶದಿಂದ ಅವನ ಕಲ್ಪನೆ ಕನಸಾಯಗಿಯೇ ಉಳಿಯುತ್ತದೆ. ಕರೀಮನಿಗೆ ಇದ್ದಂತಹ ಮಗಳು ಫಾತಿಮಾ, ಹೆಂಡತಿ ಉನ್ನೀಸಾ ಅವನನ್ನು ಅಗಲದ ತಾಯಿ ಎಲ್ಲರೂ ಸಹ ಅವನ ಸಾಧಾರಣ ಕುಟುಂಬ ಸಾಗಲು, ಅವನ ಸಂಕಷ್ಟಗಳಿಗೆ ಬೆಂಬಲಿತರಾಗಿ ಕಾಣುತ್ತಾರೆ. ಅಲ್ಲದೆ ನೆರೆಮನೆಯ ಹಿಂದೂ ಹುಡುಗಿ ಪ್ರೇಮಾ 'ಏ ಕರೀಮಣ್ಣ, ಉನ್ನೀಸಾ ಬೆಹನ್ ಹೆತ್ತಾಳೆ! ಪೇಡ ತತ್ತಾ ಪೇಡ' ಎಂದು ಹೇಳುವಲ್ಲಿ ಮತ್ತೊಂದು ಸಮುದಾಯದ ಹೆಣ್ಣುಮಗಳೊಂದಿಗೆ ಕರೀಮನು ಹೊಂದಿರುವ ಅವಿನಾಭಾವ ಸಂಬಂಧವನ್ನು ಕಾಣಿಸುತ್ತದೆ.

ಒಂದೇ ಕುಟುಂಬಕ್ಕೆ ಸಂಬಂಧಿಸಿದ ಅಣ್ಣ–ತಮ್ಮಂದಿರು, ಅವರ ಹೆಂಡತಿಯರು ಹೊಂದಾಣಿಕೆಯಾಗದ ಕಾರಣದಿಂದ ಬೇರೆಯಾಗಿ ಮತ್ತೆ ಒಂದಾಗುವುದು ಚದುರಂಗರ **'ಒಂದು ಉಂಗುರದ ಕಥೆ'**ಯಲ್ಲಿ ಅಡಕವಾಗಿದೆ. ಧರ್ಮರಾಯರಂಥ ರುಮಾಲೆ ಸಂಗಪ್ಪನು ತಮ್ಮ ಸಣ್ಣೀರನು ತಂಗಿ ಶಂಕರಮ್ಮಳು ಸುಖವಾಗಿರಲೆಂದು ತಮ್ಮ ಆಸ್ತಿಯಲ್ಲಿ ಪಾಲು ಮಾಡಿರುತ್ತಾರೆ. ಇದು ಸಣ್ಣೀರನ ಹೆಂಡತಿಯ ಆಕ್ರೋಶಕ್ಕೆ ಕಾರಣವಾಗಿರುತ್ತದೆ. ಹಾಗಾಗಿಯೇ 'ರುಜು ಮಾಡಬೇಡಿ' ಎಂದು ಹೇಳಿದರೆ ಕೇಳದೆ ರುಜು ಹಾಕಿಬಿಟ್ಟಿರಿ, 'ಅನಾಥೆ ಅಂತ ಹೊಲ ಕೊಟ್ಟರೆ ಕೊಟ್ಟಗೊಳಲಿ, ಆದರೆ ಆರು ಎಕರೆ ಗದ್ದೇಲಿ ಎರಡು ಎಕರೆ ಹೋದರೆ

ಇನ್ನು ಉಳಿಯುವುದು ನಾಲ್ಕು ಎಕರೆ' ಅದರಲ್ಲಿ ನಮ್ಮ ಪಾಲು ಎರಡು ಎಕರೆ. ಹೀಗೆ ಹೇಳುವ ಸಣ್ಣೀರನ ಹೆಂಡತಿ ದೇವೀರಿಯ ಮಾತುಗಳಲ್ಲಿ ಸ್ತ್ರೀಯರಿಗೂ ಆಸ್ತಿಯಲ್ಲಿ ಪಾಲಿದೆ ಎಂಬ ತತ್ವ ಅಡಕವಾಗಿದೆ. ಆದರೆ ಅದನ್ನು ಕೊಡುವ ಮನಸ್ಸಿರಬೇಕು ಅಷ್ಟೇ. ಆದರೆ ದೇವೀರಿಯ ಮನಸ್ಸು ಇಂತಹದ್ದಲ್ಲ. ಇದನ್ನು ಸಹಿಸದ ಅವಳು ತನ್ನ ಗಂಡನಿಗೆ 'ಆಸ್ತಿಯಲ್ಲಿ ಪಾಲು ಮಾಡಿಕೊಳ್ಳಿ, ಇಲ್ಲಾಂದ್ರೆ ಕಡೆಗೆ ನಮ್ಮ ಕೈಗೆ ಸಿಕ್ಕೋದು ಬರಿ ಚಿಪ್ಪು!' ಎಂದು ಗಂಡನಿಗೆ ಹೇಳುತ್ತಾಳೆ. ಈ ಕಾರಣದಿಂದ ಮನೆಯಲ್ಲಿ, ಮನದಲ್ಲಿ ಪಾಲಾಗುತ್ತದೆ. ತುಂಬುಜೀವನ ನಡೆಸಿಕೊಂಡು ಹೊರಟಿದ್ದ ಕುಟುಂಬದಲ್ಲಿ ಒಂದೇ ಮನೆಯಲ್ಲಿ ಒಳಗೋಡೆ ನಿರ್ಮಾಣವಾಗುವುದರೊಂದಿಗೆ ಎರಡು ಬಾಗಿಲುಗಳಾಗುತ್ತವೆ. ಈ ಒಳಗೋಡೆ ನಿರ್ಮಾಣ ಮಾಡುವಾಗ ಮೋಹಿನಿಯ ಕಾಟದಿಂದ ತಪ್ಪಿಸಿಕೊಳ್ಳಲು ಸಣ್ಣೀರನು ತೊಟ್ಟಿದ್ದ ಮಂತ್ರವಾದಿಯ ಪಂಚಲೋಹದ ಉಂಗುರವು ಕಳೆದುಹೋಗುತ್ತದೆ. ಈ ಉಂಗುರವನ್ನು ಹುಡುಕುವ ಸಲುವಾಗಿ ತಮ್ಮ ಹಜಾರದಲ್ಲಿ ನಿರ್ಮಾಣ ಮಾಡಿದ್ದ ಒಳಗೋಡೆಯನ್ನು ಸಣ್ಣೀರನು ಕೆಡುವುತ್ತಾನೆ. ಆದರೆ ಅಲ್ಲಿ ಉಂಗುರ ಸಿಗುವುದಿಲ್ಲ. ಆಗ 'ನನ್ನ ದುರ್ಬುದ್ಧಿಗೆ ತಕ್ಕ ಪ್ರತಿಫಲ ಈಗ ನನಗೆ ಸಿಕ್ತಾ ಇದೆ' ಎಂದು ಸಣ್ಣೀರನು ತನ್ನ ಹೆಂಡತಿಯ ಮೇಲೆ ರೇಗುತ್ತಾನೆ. ದೇವೀರಿ ಅವರಿವರ ಮಾತು ಕೇಳಿಕೊಂಡು ನಾನು ಎಂತಹ ಕೆಟ್ಟ ಕೆಲಸ ಮಾಡಿಬಿಟ್ಟೆ, ಅಕ್ಕ ಮತ್ತು ಭಾವ ಒಳ್ಳೆಯವರು. ನಾನೇಕೆ ಅವರನ್ನು ದ್ವೇಷಿಸಿಬಿಟ್ಟೆ ಎಂದು ಅಂದುಕೊಳ್ಳುವಲ್ಲಿ ಸ್ತ್ರೀ ಮನಃ ಪರಿವರ್ತನೆಯಿದೆ, ಪಶ್ಚಾತ್ತಾಪವಿದೆ, ಅಪರಾಧಿ ಭಾವವಿದೆ.

ದೇವೀರಿಗೆ ಹೆರಿಗೆ ನೋವು ಕಾಣಿಸಿಕೊಂಡ ಸಂದರ್ಭ, ನೋವು ತಡೆಯಲಾರದೆ ನರಳುವ ಸದ್ದು ಕೇಳಿಸಿದರೂ 'ನರಳಿದರೆ ನರಳ್ತಾರೆ ಲೌಡಿ' ಎಂದುಕೊಳ್ಳುವಲ್ಲಿ ಗೌರಮ್ಮಳ ಗಟ್ಟಿ ಮನಸ್ಸು ಇದೆ. ಆದರೂ 'ದೊಡ್ಡವ್ವ, ದೊಡ್ಡವ್ವ... ವೊಟ್ಟೆ ಅಸೀತಿದೆ ದೊಡ್ಡವ್ವ' ಎಂದು ಅದೇ ದೇವೀರಿಯ ಮೂರು ವರ್ಷದ ಮಗಳು ಕೇಳಿದಾಗ 'ಬಾ ಬಾ ಬೋನ ಆಗದೆ ಉಣ್ಣೋವಂತೆ' ಎನ್ನುವಲ್ಲಿ ತಾಯ್ತನದ ಮೃದು ಸ್ವಭಾವವನ್ನು ಕಾಣುತ್ತೇವೆ. ದೇವೀರಿ 'ಅಯ್ಯೋ ನಾ ತಡೀನಾರೆ ನೋವ' ಎಂದು ಚೀರಿದಾಗ ಭಯಗೊಂಡ ಆ ಮಗು ತನ್ನ ದೊಡ್ಡಮ್ಮನಿಗೆ 'ನಂಗೆ ಹೆದರಿಕೆ ಆಯ್ತದೆ, ನೀನು ಬಾ ದೊಡ್ಡವ್ವ' ಎಂದು ಬೇಡುತ್ತದೆ, ಅಂಗಲಾಚುತ್ತದೆ. ಮಗುವಿನ ಈ ಗೋಗರೆಗೆ ಸೋತ ಗೌರಮ್ಮಳು, ದೇವೀರಿ ಇದ್ದ ಕೋಣೆಗೆ ಬರುತ್ತಾಳೆ. ದೇವೀರಿ ಸ್ಥಿತಿಯನ್ನು ಕಂಡ ಗೌರಮ್ಮಳ ಅಂತಃಕರಣ ಸಂಪೂರ್ಣ ಕರಗಿ 'ದೇವೀರಿ ನಾನಿದ್ದೀನಿ. ಭಯಪಡಬೇಡ' ಎಂದು ಸಮಾಧಾನ ಮಾಡುತ್ತಾಳೆ. ಅಲ್ಲದೆ ಅಯ್ಯೋ ನೀವ್ಯಾಕೆ ಬಂದಿರಿ, ನಾನು ಸತ್ತು ಹೋಗ್ತೀನಿ ಎಂದ ದೇವೀರಿಗೆ 'ನೀ ಯಾಕೆ ಸಾಯಬೇಕು? ಏನೋ ಕೆಟ್ಟ ಗಳಿಗೆ, ಹಂಗೆ ಆಡಿಸ್ತು ಅದನ್ನೆಲ್ಲ ನಾ ಮರೆತಿದೀನಿ' ಎಂದು ಧೈರ್ಯದ ಮಾತುಗಳನ್ನು ಹೇಳುತ್ತಾಳೆ. ಇದು ಜೀವನದಲ್ಲಿ ಬರುವ ದ್ವೇಷಾಸೂಯೆಗಳು ಬಲವಾಗಿ ಮುಂದುವರಿಯದೆ, ಬಂದ ರೀತಿಯಲ್ಲೇ ಕ್ಷಣಿಕವಾಗಿ ಕಾಣಿಸಿ ಮಾಯವಾಗುತ್ತವೆ ಎಂಬುದನ್ನು ತೋರಿಸುತ್ತದೆ. ಅಲ್ಲದೆ ಅವಿಭಕ್ತ ಕುಟುಂಬದಲ್ಲಿ ಸರಸ–ವಿರಸ, ಕೋಪ, ಜಗಳ, ಮುನಿಸುಗಳು ಮಾಮೂಲಿ. ಇದನ್ನೆಲ್ಲ ದಾಟಿದರೆ ಮಾತ್ರ ಜೀವನಕ್ಕೆ, ಜೀವಕ್ಕೆ ಒಂದು ಸಾರ್ಥಕತೆ ಎಂಬುದು ಈ ಕಥೆಯಲ್ಲಿ ಚಿತ್ರಿತವಾಗಿದೆ. ಈ ಕಥೆಯ ಕೊನೆಗೆ ಎರಡು ಸಂಸಾರಗಳೂ ಒಂದಾಗಲು ಕಳೆದುಹೋದ ಉಂಗುರ ಮತ್ತೆ ಸಿಕ್ಕ ಕಾರಣದಿಂದ 'ಎಲ್ಲ ಉಂಗುರದ ಮಹಿಮೆ' ಎಂದುಕೊಳ್ಳುವಲ್ಲಿ ಕಥೆಯು ಮುಕ್ತಾಯವಾಗುತ್ತದೆ.

ಈ ಕಥೆಯಲ್ಲಿ ಜೀವನವನ್ನು ಪ್ರೀತಿಸುವ ಜೊತೆಗೆ ಅದನ್ನು ಕಲಿಸಿಕೊಡುವ ಗೌರಮ್ಮನಂತಹವರು ಕಾಣಸಿಗುತ್ತಾರೆ. ಹಾಗಾಗಿಯೇ ತನ್ನ ಹಿರಿಯ ಮಗಳು ಪಾರ್ವತಿಯನ್ನು ಕರೆಸಿ 'ಅಡುಗೆ ಕೋಣೆಗೆ ಹೋಗಿ ದೊಡ್ಡ ಸಿಲವಾರದ ಬೋಸಿಗೆ ನೀರು ತುಂಬಿ ಒಲೆ ಮೇಲಿಡು. ಒಲೆ ಗೂಡಿನಿಂದ ಹೊರಕ್ಕೆ ಹಿರಿದಿರೋ ಕೊಳ್ಳೀಲಿ ಇನ್ನೂ ಕೆಂಡ ಕವರುತ್ತಲೆ ಅದೆ. ಅದನ್ನು ಒಳಕ್ಕೆ ತಳ್ಳಿ ಉರಿ ಮಾಡಿ, ಸಿಲವಾರದ ಬೋಸಿಲಿ ಬಿಸಿ ನೀರ ಕಾಯಿಸಿಕೊಂಡು ಚಟಪಟನೆ ತಕ್ಕೊಂಡು ಬಾ' ಎಂದು ಹೇಳುತ್ತಾಳೆ. ಇದು ಸ್ತ್ರೀಯರ ಬದುಕಿನ ಮೊದಲ ಪಾಠವಾಗಿ ಕಾಣುತ್ತದೆ. ಅಂದರೆ ಸ್ತ್ರೀಯಾದವಳು ಮನೆಯ ಕೆಲಸಗಳನ್ನು ಸರಿಯಾಗಿ ನಿಭಾಯಿಸಲು ಸಮರ್ಥಳಾಗಬೇಕು. ಆಗ ಮಾತ್ರ ಬದುಕು ನಾವು ಅಂದುಕೊಂಡಂತೆ ಸರಾಗವಾಗಿ ನಡೆಯುತ್ತದೆ. ಕಲಿಯುವ ವಯಸ್ಸಿನಲ್ಲಿ ಎಲ್ಲವನ್ನು ಚೆನ್ನಾಗಿ, ಸಮರ್ಥವಾಗಿ ಕಲಿತರೆ ಒಳ್ಳೆಯದು ಎಂಬ ನೀತಿಪಾಠದಂತೆ ಕಾಣುತ್ತದೆ.

'ರೊಟ್ಟಿ, ಅವ್ವ ರೊಟ್ಟಿ ಮಾಡ್ತಾ ಇವ್ನಿ' ಎಂದು ಹೇಳುವ ದೇವೀರಿಯ ಎರಡು ವರ್ಷದ ಮಗಳ ಮಾತುಗಳಲ್ಲಿ ಸ್ತ್ರೀಯರ ಬದುಕು ಅಡುಗೆಯಿಂದಲೇ ಆರಂಭವಾಗುತ್ತದೆ ಎಂದು ಈ ಕಥೆಯಲ್ಲಿ ಚಿತ್ರಿಸಿದಂತೆ ಕಾಣುತ್ತದೆ. ಇದು ಕಥೆಗಾರರ ಕಥೆಯ ನ್ಯೂನತೆಯಾಗಿ ಕಾಣುತ್ತದೆ. ಏಕೆಂದರೆ ಅದೇ ಮಗುವಿನ ಜೊತೆಗೆ ಆಟವಾಡುತ್ತಿದ್ದ ಆರು ವರ್ಷದ ಗಂಡುಹೈದ ತಾನು ಮಾಡಿದ್ದ 'ಗೊಂಬೆಯ ಮಣ್ಣಿನ ಉಂಡೆಯನ್ನು ಕೈಯಲ್ಲಿ ಹಿಡಿದಂತೆಯೇ' ಓಡಿಹೋಗುವನು. ಹೆಣ್ಣುಮಗುವಿಗೆ ಒಂದು ನ್ಯಾಯ, ಗಂಡು ಮಗುವಿಗೆ ಒಂದು ನ್ಯಾಯ, ಒಂದು ರೀತಿಯ ತಾರತಮ್ಯವಾಗಿ ಕಾಣುವ ಈ ಕಥೆಯ ಈ ಸನ್ನಿವೇಶ ಕಥೆಯ ನ್ಯೂನತೆಯಲ್ಲದೆ ಮತ್ತಿನ್ನೇನೂ ಎಂದು ಅನ್ನಿಸದೇ ಇರಲಾರದು.

'ಅವರಿವರ ಮಾತು ಕೇಳಿಕೊಂಡು ನಾನು ಎಂತಹ ತಪ್ಪು ಮಾಡಿದೆ' ಎನ್ನುವ ದೇವೀರಿಯ ಮಾತುಗಳು ಮತ್ತು 'ಸದ್ಯ ನೀವಿಬ್ರು ಒಂದಾದಿರಲ್ಲ, ಅದೇ ಸಂತೋಷ' ಎಂಬ ಪಕ್ಕದ ಬೀದಿಯ ನಿಂಗಮ್ಮಳ ಮಾತುಗಳಲ್ಲಿ ನಮ್ಮ ಸುತ್ತಮುತ್ತ ಕೆಟ್ಟದ್ದನ್ನು ಬಯಸುವ ಮತ್ತು ಒಳ್ಳೆಯದನ್ನು ಬಯಸುವ ಹಿತೈಷಿಗಳು ಇರುತ್ತಾರೆ ಎಂಬ ಹಾಗೆ ಈ ಕಥೆಯಲ್ಲಿ ಚಿತ್ರಣಗೊಂಡಿದೆ. ಹೀಗಾಗಿಯೇ ಈ ಕಥೆಯಲ್ಲಿ ಗೌರಮ್ಮ ಮತ್ತು ನಿಂಗಮ್ಮಂತಹ ಪಾತ್ರಗಳು ನೆಮ್ಮದಿ, ಸಂತೋಷದಾಯಕ ಜೀವನವನ್ನು ಬಯಸಿದ ಪಾತ್ರಗಳಾಗಿ ಕಂಡುಬಂದರೆ, ದೇವೀರಿಯಂತ ಪಾತ್ರ "ಸ್ವತಂತ್ರ ಸ್ವ ಇಚ್ಛಾ ಪ್ರವೃತ್ತಿ"[15]ಯ ಪಾತ್ರವಾಗಿ ಕಂಡುಬರುತ್ತದೆ. ಕಥೆಗಾರರ ನೇರವಾದ ನಿರೂಪಣೆಯು ಓದುಗರ ಗಮನ ಸೆಳೆಯುತ್ತದೆ. ಬಳಸಿರುವ ವಸ್ತು ಮತ್ತು ಕಥೆಯ ಶೈಲಿಯಿಂದ ಕಥೆಗಾರರ ಕಥೆಯ ಮನೋಧರ್ಮ ಈ ಕಥೆಯ ಮೂಲಕ ತಿಳಿಯುತ್ತದೆ.

ಅ.ನ.ಕೃಷ್ಣರಾಯ ಅವರ ಪ್ರತಿರೂಪ ಕಥೆಯ 'ಕಮಲಮ್ಮ, ಲಕ್ಷ್ಮೀ', ಸ್ಮರಣ ಕಥೆಯ 'ರಂಗಮ್ಮ, ಹೊನ್ನಮ್ಮ, ಪುಟ್ಟತಾಯಿ', ತ.ರಾ.ಸುಬ್ಬರಾವ್ ಅವರ ಗಿರಿಮಲ್ಲಿಗೆಯ ನಂದನದಲ್ಲಿ ಕಥೆಯ 'ಸರಸು', ಬಸವರಾಜ ಕಟ್ಟೀಮನಿ ಅವರ ಪರಾಜಿತೆ ಕಥೆಯ 'ರತ್ನಾ, ಪಾರ್ವತಮ್ಮ', ನಿರಂಜನರ ಹೊಸಕೂಸು ಕಥೆಯ 'ಫಾತಿಮಾ', ಚದುರಂಗ ಅವರ ಒಂದು ಉಂಗುರದ ಕಥೆಯ 'ಶಂಕರಮ್ಮ, ದೇವೀರಮ್ಮ ಮತ್ತು ಗೌರಮ್ಮ' ಪಾತ್ರಗಳು ಕೌಟುಂಬಿಕ ಸಂಬಂಧಗಳನ್ನು ಗಟ್ಟಿಯಾಗಿಸುವ ಸ್ತ್ರೀಯರ ಪಾತ್ರಗಳಾಗಿ ಕಂಡುಬರುತ್ತವೆ.

ಕೊನೆಟಿಪ್ಪಣಿಗಳು

1. ಗಿರಿಜಾಶಾಸ್ತ್ರಿ., ಕಥಾ ಮಾನಸಿ, ಪು–10.
2. ಅದೇ, ಪು–11.
3. ಅದೇ, ಪು–11.
4. ಮಹೇಂದ್ರ ಎಂ., ಅ.ನ.ಕೃ ಅವರ ಕಥೆಗಳು, ಪು–131.
5. ಬೆಳ್ಳೂರು ವೆಂಕಟಪ್ಪ., ಪ್ರಗತಿಶೀಲ ಕಥನ, ಪು–47.
6. ಮಹೇಂದ್ರ ಎಂ., ಅ.ನ.ಕೃ ಅವರ ಕಥೆಗಳು, ಪು–132.
7. ಅದೇ, ಪು–132, 133.
8. ಎಚ್.ಆರ್.ತಿಮ್ಮೇಗೌಡ., ಕನ್ನಡ ಪ್ರಗತಿಶೀಲ ಸಾಹಿತ್ಯದ ಸಣ್ಣ ಕಥೆಗಳು, ಪು–135.
9. ನಾಗಾಬಾಯಿ ಬಿ.ಬಳ್ಳಾ., ಯುವಶೋಧ, ಪು–20.
10. ಮಹೇಶ್ ಎಂ.ಎನ್., ತ.ರಾ.ಸು ಸಾಹಿತ್ಯ ಒಂದು ಅಧ್ಯಯನ, ಪು–70.
11. ಎಚ್.ಜೆ.ಲಕ್ಕಪ್ಪಗೌಡ., ಸಾಹಿತ್ಯಶೋಧನ, ಪು–191.
12. ಅದೇ, ಪು–191.
13. ಎಚ್.ಆರ್.ತಿಮ್ಮೇಗೌಡ., ಕನ್ನಡ ಪ್ರಗತಿಶೀಲ ಸಾಹಿತ್ಯದ ಸಣ್ಣ ಕಥೆಗಳು, ಪು–197.
14. ನಿರಂಜನ ಸೀಮಂತಿನಿ., ಧ್ವನಿ ಸಂ–ಒಂದು, ಪು–560.
15. ಆಶಾಮಣಿ ಕೆ.ಟಿ., ಚದುರಂಗ ಕಥೆಗಳು, ಪು–18.

ಆಕರ ಗ್ರಂಥಗಳು:

- ಗಿರಿಜಾ ಶಾಸ್ತ್ರಿ., (2000). ಕಥಾ ಮಾನಸಿ, ಸಾಹಿತ್ಯ ಪ್ರಕಾಶನ, ಮುಂಬಯಿ.
- ಲಕ್ಕಪ್ಪಗೌಡ ಎಚ್.ಜೆ., (2007). ಸಾಹಿತ್ಯ ಶೋಧನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮಹೇಶ ಎಂ., (20180. ಅ.ನ.ಕೃ. ಅವರ ಕಥೆಗಳು, ಕುವೆಂಪು ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
- ಮಹೇಶ ಎಂ.ಎನ್., (2009). ತ.ರಾ.ಸು ಸಾಹಿತ್ಯ: ಒಂದು ಅಧ್ಯಯನ, ಹೇಮಂತ ಸಾಹಿತ್ಯ, ಬೆಂಗಳೂರು.
- ನಾಗಾಬಾಯಿ ಬಿ. ಬುಳ್ಳಾ(ಪ್ರ.ಸಂ)., (2012). ಜ್ಞಾನಗಂಗಾ–ಆರು, ಯುವಶೋಧ, ಕನ್ನಡ ಸಂಶೋಧನಾ ಸಂಘ, ಗುಲಬರ್ಗಾ.
- ತಿಮ್ಮೇಗೌಡ ಎಚ್.ಆರ್., (2011). ಕನ್ನಡ ಪ್ರಗತಿಶೀಲ ಸಾಹಿತ್ಯದ ಸಣ್ಣ ಕಥೆಗಳು, ಈಶ್ವರಿ ಪ್ರಕಾಶನ, ಮೈಸೂರು.